ಈ) ಕ್ಷೇತ್ರದಲ್ಲಿಯ ಉದ್ಯಾನವನಗಳನ್ನು ರಕ್ಷಿಸಲು ಪ್ರತಿ ಉದ್ಯಾನವನಕ್ಕೆ ಹಗಲು ಮತ್ತು ರಾತ್ರಿ ಪಾಳಿಗಳಿಗೆ ಇಬ್ಬರು ಪಾಲಕರನ್ನು (ವಾಚ್‌ಮನ್) ನೇಮಿಸಲಾಗಿದ್ದು, ತಲಾ ಒಬ್ಬರಿಗೆ ಮಾಸಿಕ ರೂ.3000/– (ಲಮ್‌ಸಂ) ಗಳನ್ನು ಗುತ್ತಿಗೆದಾರರ ಮೂಲಕ ನೀಡಲಾಗುತ್ತಿರುತ್ತದೆ.

ಆರಕ್ಷಕ ಠಾಣೆಗಳು

1203(896); ಶ್ರೀ ಜಗದೀಶ್ ಕುಮಾರ್ ಆರ್. (ಹೆಬ್ಬಾಳ)

ಅ) ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬರುವಂತಹ ಡಿ.ಸಿ.ಪಿ, ಎಸಿಪಿ, ಪಿಐ, ಅನುಮೋದಿತ ಹುದ್ದೆಗಳೆಷ್ಟು? ಭರ್ತಿಯಾಗಿರುವ ಮತ್ತು ಖಾಲಿಯಿರುವ ಹುದ್ದೆಗಳ ಮಾಹಿತಿ ಮತ್ತು ಸದರಿ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಹೆಸರು/ಪದನಾಮ/ಠಾಣೆ/ ಅವಧಿ ಇನ್ನಿತ್ಯಾದಿ ಸಂಪೂರ್ಣ ಮಾಹಿತಿಗಳನ್ನು ಒದಗಿಸುವುದು (ಕಾನೂನು ಸುವ್ಯವಸ್ಥೆ ಮತ್ತು ಸಂಚಾರಿ ನಿಯಂತ್ರಣ ವಿಭಾಗವಾರು ಪ್ರತ್ಯೇಕವಾಗಿ ನೀಡುವುದು);

ಆ) ಬೆಂಗಳೂರು ಮಹಾನಗರ ಪಾಲಿಕೆಯ ಆರಕ್ಷಕ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಸಿಪಿ, ಎಸಿಪಿ, ಪಿಐ ಇನ್ನಿತರೆ ಅಧಿಕಾರಿ ಹುದ್ದೆಗಳಲ್ಲಿ ಒಂದೇ ಸಮುದಾಯದ ಅಧಿಕಾರಿಗಳು ಹೆಚ್ಚಿನ ಪ್ರಮಾಣದಲ್ಲಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ರೀತಿಯ ಉನ್ನತ ಹುದ್ದೆಯಲ್ಲಿರುವ ಅಧಿಕಾರಿಗಳು ಯಾವ ಯಾವ ಸಮುದಾಯಕ್ಕೆ ಸೇರಿರುತ್ತಾರೆಂಬ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು;

ಇ) ಇಲಾಖೆಯ ಉನ್ನತ ಹುದ್ದೆಗಳಲ್ಲಿ (ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ) ಒಂದೇ ಸಮುದಾಯದ ಅಧಿಕಾರಿಗಳಿರುವುದು ಸಮಂಜಸವೇ; ಇದರಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ಹೋಗುವ ಅಂಶಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಬೆಂಗಳೂರು ನಗರದ ಪೊಲೀಸ್ ಕಮೀಷನರೇಟ್‌ನಲ್ಲಿ 07 ಕಾನೂನು ಮತ್ತು ಸುವ್ಯವಸ್ಥೆ ವಿಭಾಗಗಳು ಮತ್ತು 02 ಸಂಚಾರ ವಿಭಾಗಗಳಿರುತ್ತವೆ. ಸದರಿ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡಿಸಿಪಿ, ಎಸಿಪಿ ಮತ್ತು ಪಿಐ ರವರುಗಳ ವಿವರಗಳು ಮತ್ತು ಬಲಾಬಲದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಅರ್ಹ ದಕ್ಷ ಅಧಿಕಾರಿಗಳನ್ನು ಪೊಲೀಸ್ ಸಿಬ್ಬಂದಿ ಮಂಡಳಿ (ಪಿಇಬಿ) ಯು ಡಿವೈಎಸ್‌ಪಿ ದರ್ಜೆಗಿಂತ ಕೆಳಗಿನ ಅಧಿಕಾರಿಗಳನ್ನು ನೇಮಿಸುತ್ತದೆ. ಹಾಗೆಯೇ ಐಪಿಎಸ್ ದರ್ಜೆಯ ಅಧಿಕಾರಿಗಳನ್ನು ನೇಮಿಸುವ ಅಧಿಕಾರವು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ನೇಮಿಸುತ್ತದೆ. ಸದರಿ ಸ್ಥಳ ನಿಯುಕ್ತಿಯನ್ನು ಯಾವುದೇ ಜಾತಿ ಆಧಾರದಲ್ಲಿ ಮಾಡುತ್ತಿರುವುದಿಲ್ಲ.

ಇ) ಬೆಂಗಳೂರು ನಗರ ಪೊಲೀಸ್ ಕಮೀಷನರೇಟ್‌ನ ಕಾನೂನು & ಸುವ್ಯವಸ್ಥೆ ಮತ್ತು ಸಂಚಾರ ವಿಭಾಗಗಳಲ್ಲಿ ಎಲ್ಲಾ ಸಮುದಾಯದ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ.

ಅನುಬಂಧ

(ಕಾನೂನು ಸುವ್ಯವಸ್ಥೆ ವಿಭಾಗಗಳು)

ಕ್ರ ಸಂ	ಕಾನೂನು ವಿಭಾಗ	ಡಿ.ಸಿ.ಪಿ			ಎ.ಸಿ.ಪಿ			ಪಿ.ಐ		
		ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ	ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ	ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ
1	ಪೂರ್ವ	1	1	-	3	3	-	16	15	1
2	ಪಶ್ಚಿಮ	1	1	-	3	3	-	16	16	-
3	ಉತ್ತರ	1	1	-	3	3	-	18	18	-
4	ದಕ್ಷಿಣ	1	1	-	3	3	-	18	17	1
5	ಕೇಂದ್ರ	1	1	-	3	3	-	12	12	-
6	ಈಶಾನ್ಯ	1	1	-	3	3	-	10	10	-
7	ಆಗ್ನೇಯ	1	1	-	3	3	-	13	13	-
	ಒಟ್ಟು	7	7	-	21	21	-	103	101	2

(ಸಂಚಾರ ವಿಭಾಗಗಳು)

ಕ್ರ ಸಂ	ಸಂಚಾರ ವಿಭಾಗ	ಡಿ.ಸಿ.ಪಿ			ಎ.ಸಿ.ಪಿ			ಪಿ.ಐ		
		ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ	ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ	ಮಂಜೂರಾತಿ ಬಲ	ಹಾಲ ಬಲ	ರಿಕ್ತ ಸ್ಥಾನ
1	ಪೂರ್ವ	1	1	-	4	4	-	23	21	2
2	ಪಶ್ಚಿಮ	1	1	-	4	4	-	23	22	1
	ಒಟ್ಟು	2	2	-	8	8	-	46	43	3